# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನಲ್ಲಿ ದಿನಾಂಕ: 07-11-2020 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21 /21-09-2020 ರ ಆದೇಶದಂತೆ ದಿನಾಂಕ: 21-09-2020 ರವರ ಆದೇಶದಂತೆ ದಿನಾಂಕ: 07-11-2020 ರಂದು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

### ಸಭೆಗೆ ಹಾಜರಿದ್ದವರ ವಿವರಗಳು

| ಕ್ರಮ ಸಂಖ್ಯೆ | ಹೆಸರು | ಪದ ನಾಮ |
|---|---|---|
| 1 | ಶ್ರೀ.ಬಿ ಮಹೇಶ್ ಕುಮಾರ್ | ನೋಡಲ್ ಅಧಿಕಾರಿ,<br>ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ) |
| 2 | ಶ್ರೀ. ಮೂರ್ತಿ | ಕಾರ್ಯದರ್ಶೀ<br>ಸಹಾಯಕ ಅಭಿಯಂತರರು ವಾರ್ಡ್ -89 |
| 3 | ಶ್ರೀ.ಚಂದ್ರಪ್ಪ ಬೀರಜ್ಜನವರ, | ಸಹ ಕಂದಾಯ ಅಧಿಕ್ಯಾರಿ (ದೊಮ್ಮಲೂರು) |
| 4 | ಶ್ರೀಕಾಂತಾ | ಕಿರಿಯ ಆರೋಗ್ಯ ಅಧಿಕಾರಿ (ವಾರ್ಡ್ 89) |
| 5 | ಆಶಾ ಆಲ್ವಿನ್ | ಮಹಿಳಾ ಸದಸ್ಯರು |
| 6 | ಗಾಯತ್ರಿ | ಮಹಿಳಾ ಸದಸ್ಯರು |
| 7 | ಉಮೇಶ್ | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಸದಸ್ಯರು |
| 8 | ಕುಮಾರನ್ | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಸದಸ್ಯರು |
| 9 | ರಮೇಶ್ ರೆಡ್ಡಿ | ಸಾಮಾನ್ಯ ಸದಸ್ಯರು |
| 10 | ನಂದಿಶ್ ಗೌಡ | ಸಾಮಾನ್ಯ ಸದಸ್ಯರು |
| 11 | ಶ್ರೀನಿವಾಸ್ ನಾಯುಡು , | ಸಾಮಾನ್ಯ ಸದಸ್ಯರು |
| 12 | ಗಜರಾಜ | ಹಲಸೂರು ವೆಲ್ಪೇರ್ ಅಸೋಸಿಏಷನ್ |

ದಿನಾಂಕ: 07-11-2020 ರಂದು ಸಂಜೆ 4-00 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂದ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ, ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳಿಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ ಸದರಿ ವಾರ್ಡ್‌ನ ಎಲ್ಲಾ ಕುಂದು ಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ನೊಡಲ್ ಅಧಿಕಾರಿಗಳು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಗೆ ನಿರ್ದೇಶನವನ್ನು ನೀಡಲಾಯಿತು.

ಮುಂದುವರೆದು ಈ ಹಿಂದೆ ದಿನಾಂಕ: 20-10-2020 ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತಹ ವಿಷಯಗಳನ್ನು ನೋಡೆಲ್ ಅಧಿಕಾರಿ ರವರ ಮೊತ್ತೋಮ್ಮೆ ಸಭೆಯಲ್ಲಿ ರಸ್ತೆ ದುರಸ್ಥಿ, ಕಾಮಗಾರಿ, ನೀರಿನ ಸಮಸ್ಯೆ, ಒಳಚರಂಡಿ ಸಮಸ್ಯೆ ಬೀದಿ ದೀಪಗಳ ಸಮಸ್ಯೆ, ಬೀದಿ ಬದಿ ವ್ಯಾಪಾರಿಗಳು, ರಸ್ತೆ ಅತಿ ಕ್ರಮಣ ದಿಂದ ಸಂಚಾರ ಸಮಸ್ಯೆ, ಟೆಂಪೋ ಸ್ಯಾಂಡ್ ಸಮಸ್ಯೆ, ಮರಗಳ ಟ್ರಿಮಿಂಗ್ ಮಾಡುವ ಬಗ್ಗೆ, ಸರ ಕಳ್ಳರ ಹವಾಳಿ ಕುರಿತು ಚರ್ಚಿಸಲಾಯಿತು.

- **ನೀರು ಮತ್ತು ಒಳಚರಂಡಿ ಸಮಸ್ಯೆ:-**
- **ಸಾರ್ವಜನಿಕರ ಕುಡಿಯುವ ನೀರಿನ ನಲ್ಲಿ ಬಗ್ಗೆ.**
- **ಮರಗಳ ಟ್ರಿಮಿಂಗ್ ಬಗ್ಗೆ.**
- **ಸಂಚಾರಿ ಸಮಸ್ಯೆ:-**
- **ಕಸದ ಸಮಸ್ಯೆ: -**
- **ಕಾಮಗಾರಿ ಬಗ್ಗೆ,**
- **ಕಾನೂನು ಸುವ್ಯವಸ್ಥೆ ಬಗ್ಗೆ,**
- **ಕೋವಿಡ್ -19 ಬಗ್ಗೆ**

**ನೀರು ಮತ್ತು ಒಳಚರಂಡಿ ಸಮಸ್ಯೆ:-**

10ನೇ ಮುಖ್ಯರಸ್ತೆಯಲ್ಲಿ, ರಸ್ತೆ ಕಾಮಗಾರಿ ಕೆಲಸ ಇನ್ನೂ ಪೂರ್ಣಗೊಂಡಿಲ್ಲ ನೀರಿನ ಪೈಪ್ ಅಳವಡಿಸಿಲ್ಲ ಇದರಿಂದ ಸಾರ್ವಜನಿಕರು ಓಡಾಡಲು ವಾಹನಗಳು ಸಂಚಾರ ಮಾಡಲು ತೊಂದರೆ ಆಗುತ್ತಿದೆ ಯಾವಾಗ ರಸ್ತೆ ಹಾಗೂ ನೀರಿನ ಪೈಪ್ ಅಳವಡಿಸುವ ಕೆಲಸ ಪೂರ್ಣಗೊಳ್ಳುವುದೆಂದು ಸಭೆಯಲ್ಲಿ ಸದಸ್ಯರು ಪ್ರಶ್ನಿಸಿದರು.

ಈ ಬಗ್ಗೆ BWSSB AEE ನಾಗರಾಜ ರವರು ಮಾತನಾಡಿ ಮಳೆ ಮತ್ತು ದಸಾರ ಹಬ್ಬ ಇದ್ದ ಕಾರಣ ನೀರಿನ ಪೈಪ್ ಅಳವಡಿಸಲು ಸ್ವಲ್ಪ ತಡವಾಗಿದೆ ವಾರ್ಡಿನ ಎಲ್ಲಾ ಕಡೆ ಶೇಕಡ 70ರ ಭಾಗಶ: ಕೆಲಸ ಪೂರ್ಣಗೊಂಡಿದೆ, ಇನ್ನೂ ಉಳಿದ 30% ಭಾಗಶಃ ಈ ತಿಂಗಳು ದೀಪವಳಿ ಹಬ್ಬದ ನಂತರ ಪೂರ್ಣಗೊಳಸಲಾಗುವುದೆಂದು ಉತ್ತರಿಸಿದರು.

ತದನಂತರ ನೋಡೆಲ್ ಅಧಿಕಾರಿ ರವರು ಇನ್ನೂ 20 ದಿನಗಳಲ್ಲಿ ನೀರಿನ ಪೈಪ್ ಅಳುವಡಿಕೆ ಒಳಚರಂಡಿ ಕಾಂಗಾರಿ ಕೆಲಸ ಪೂರ್ಣಗೊಳ್ಳದಿದ್ದರೆ ಸದರಿ ವಿಷಯದ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು BWSSB ಅಧಿಕಾರಿಗಳಿಗೆ ಎಚ್ಚರಿಕೆಯನ್ನು ನೀಡಲಾಯಿತ್ತು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ನಾಗರಿಕರು ಹಾಗೂ HRA ಸದಸ್ಯರಾದ ಶ್ರೀ. ಉಮೇಶ್ ರೆಡ್ಡಿ ಮತ್ತು ಕುಪ್ಪಸ್ವಾಮಿ ಮಾತನಾಡಿ, ಜೋಗುಪಾಳ್ಯ ವಾರ್ಡಿನ ಮುನಿಸ್ವಾಮಪ್ಪ ರಸ್ತೆ ಮತ್ತು ಮಾರಪ್ಪ ರಸ್ತೆಯಲ್ಲಿ ಒಳಚರಂಡಿ ಪೈಪ್ ಅಳವಡಿಸಲು BWSSB ಅಧಿಕಾರಿಗಳು ಪ್ರತಿ ಮನೆಯವರಿಗೆ ರೂ. 3000/- ಹಣ ಕೇಳುತ್ತಿದ್ದರೆ, BWSSB ರವರು ಒಳಚರಂಡಿ ಕಾಮಗಾರಿಗಾಗಿ

ಮನೆಗಳ Connection ತೆರೆದ್ದಿದ್ದು ನಾವು ಯಾಕೆ ಹಣ ನೀಡಬೇಕೆಂದು ಪ್ರಶ್ನಿಸಿದರು.ಇದಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದೆಂದು ನೋಡೆಲ್ ಅಧಿಕಾರಿ ರವರು ತಿಳಿಸಿದರು.

ನೀವು CONTRACTOR ರವರಿಗೆ ವರ್ಕ್ ಆರ್ಡರ್ ನೀಡಿ ತಾವು ಸುಮ್ಮನೆ ಆಗುತ್ತಿರಿ ಕಾಮಗಾರಿ ಕೆಲಸ ನಡೆಯುವಾಗ ಅಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿ ಕಾಮಗಾರಿಯ್ನನು ಪರಿಶೀಲಿಸಬೇಕು ಸ್ಥಳೀಯ ನಾಗರೀಕರೊಂದಿಗೆ ಚರ್ಚಿಸಿ ಸ್ಪಂದಿಸಬೇಕೆಂದು ಒಂದು ಮನೆಗೆ ಒಂದು ಕನೆಕ್ಷನ್ ನೀಡಬೇಕು , ಎರಡು ಕನೆಕ್ಷನ್ ನೀಡಬಾರದೆಂದು ಕೋರಿದರು.

ಆಗಾಗಿ ನೋಡೆಲ್ ಅಧಿಕಾರಿ ಮತ್ತು ಕಾರ್ಯದರ್ಶಿಗಳು ಸೋಮುವಾರ ಬೆಳಗ್ಗೆ ೨-೦೦ ಗಂಟೆಗೆ ಸ್ಥಳಿಯರೊಂದಿಗೆ ಸೇರಿ ಒಳಚರಂಡಿ ಮತ್ತು ನೀರಿನ ಪೈಪ್ ಅಳವಡಿಕೆಯ ಕಾಮಗಾರಿಯ ಪರಿಶೀಲನೆ ಬಗ್ಗೆ ವಿಚಾರಿಸಲಾಗುವುದೆಂದು ತಿಳಸಿದರು.

## ಸಾರ್ವಜನಿಕರ ಕುಡಿಯುವ ನೀರಿನ ನಲ್ಲಿ ಬಗ್ಗೆ.

ಸದರಿ ವಿಷಯದ ಬಗ್ಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾಯಿತು, ಮಂಜುನಾಥ್ ವರ್ಕ್ ಇನ್‌ಸ್ಪೆಕ್ಟರ್, ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ತಿಳಸಲಾಗಿತ್ತು ಇದರ ಬಗ್ಗೆ ಮುಂದಿನ ಕ್ರಮ ಏನು? ಮಾಡಲಾಗಿದೆಂದು ಸಭೆಯಲ್ಲಿ ನೋಡೆಲ್ ಅಧಿಕಾರಿಗಳನ್ನು ಪ್ರಶ್ನಿಸಲಾಯಿತು.

ಈ ಬಗ್ಗೆ ನೋಡಲ್ ಅಧಿಕಾರಿ ರವರು BWSSB AEE ನಾಗರಾಜ ರವರನ್ನು ಉತ್ತರಿಸಲು ತಿಳಿಸಿದರು.

ಈ ಬಗ್ಗೆ BWSSB AEE ನಾಗರಾಜ ರವರು ಮಾತನಾಡಿ ಈ ಹಿಂದೆ ಸಾರ್ವಜನಿಕರು ಕುಡಿಯುವ ನೀರಿಗೆ ಪಾಲಿಕೆಯ ವತಿಯಿಂದ ಹಣ ಪಾವತಿ ಆಗುತ್ತಿತ್ತು ಈಗ ಪಾಲಿಕೆಯಿಂದ ಹಣ ಪಾವತಿ ಮಾಡುತ್ತಿಲ್ಲ ಮತ್ತು ಮೇಲಾಧಿಕಾರಿಗಳು ಸಾರ್ವಜನಿಕರು ಕುಡಿಯುವ ನೀರಿನ ನಲ್ಲಿಗಳನ್ನು ಬೀದಿಗಳಲ್ಲಿ ತೆರವುಗೊಳಿಸಿ ಪ್ರತಿ ಮನೆಗೆ ಕುಡಿಯುವ ನೀರಿನ ನಲ್ಲಿಯನ್ನು ಅಳವಡಿಸಲು ಅದಕ್ಕೆ ಮೀಟರ್ ಅಳವಡಿಸಲು ಸೂಚಿಸಿರುತ್ತಾರೆ, ಅದ್ದರಿಂದ ಈಗ ಅನಧಿಕೃತವಾಗಿ ಕುಡಿಯುವ ನೀರಿನ ನಲ್ಲಿಯನ್ನು ಬೀದಿಗಳಲ್ಲಿ ಮರು ಜೋಡಿಸಿ ಮಾಡುವಂತಿಲ್ಲವೆಂದು ಉತ್ತರಿಸಿದರು.

## ಮರಗಳ ಟ್ರಿಮಿಂಗ್ ಬಗ್ಗೆ.

ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಸದಸ್ಯರಾದ ಹೇಮಂತ್ ನಾಗಾ ಮತ್ತು ಸಂಗೀತ ರವರುಗಳು ಮಾತನಾಡಿ ಜಿ ಸ್ಟ್ರೀಟ್ ನಲ್ಲಿ ಮರಗಳನ್ನು ಟ್ರಿಮಿಂಗ್ ಮಾಡಲಾಗಿದೆ. ಅದರೆ ಟ್ರಿಮಿಂಗ್ ಮಾಡಿರುವಂತಹ ಮರಗಳ ಎಲೆ ಕೊಂಬೆಗಳನ್ನು ತೆರೆವುಗೊಳಿಸಿರುವುದಿಲ್ಲ ಸಂಬಂಧ ಪಟ್ಟ ಅಧಿಕಾರಿಗಳು ವಿಚಾರಿಸಿ ಬಗೆಹರಿಸಲು ಕೋರಿದರು.

ಈ ಬಗ್ಗೆ ನೋಡೆಲ್ ಅಧಿಕಾರಿ ರವರು ಅರಣ್ಯ ಇಲಾಖೆಯಿಂದ ಬಂದಿರುವ ಸಿಬ್ಬಂಧಿ ರವರನ್ನು ಮಾತನಾಡಲು ಸೂಚಿಸಿದರು, ಆದರೆ ಸಭೆಗೆ ಅರಣ್ಯ ಇಲಾಖೆಯಿಂದ ಯಾರು

ಹಾಜರಾಗಿರುವುದಿಲ್ಲ ಮುಂದಿನ ಸಭೆಗೆ ಅರಣ್ಯ ಇಲಾಖೆಯಿಂದ ಸಿಬ್ಬಂದಿ /ಅಧಿಕಾರಿಗಳನ್ನು ಸಭೆಗೆ ಹಾಜರಾಗಲು ಸೂಚಿಸಲಾಗುವುದೆಂದು ತಿಳಿಸಿದರು.

**ಸಂಚಾರಿ ಸಮಸ್ಯೆ:-**

ಶ್ರೀಮತಿ. ಕವಿತ (PSI) ಸಂಚಾರಿ ಪೋಲಿಸ್ ರವರು ಮತ್ತೊಮ್ಮೆ ಬೀದಿ ಬದಿ ವ್ಯಾಪಾರಿಗಳು ಮತ್ತು ತಳ್ಳುವ ಗಾಡಿ ವ್ಯಾಪಾರಿಗಳಿಂದ ವಾಹನ ಸವಾರರಿಗೆ ಸಂಚಾರಿ ಸಮಸ್ಯೆ ಆಗುತ್ತಿದೆ ಪಾಲಿಕೆ ಸಿಬ್ಬಂದಿ ಅಧಿಕಾರಿಗಳು ನಮ್ಮೊಗೊಂದಿಗೆ ಕೈ ಜೋಡಿಸಿ ತೆರೆವುಗೊಳಿಸುವ ಕಾರ್ಯವನ್ನು ಮಾಡಬೇಕೆಂದು ಸಭೆಯಲ್ಲಿ ಕೋರಲಾಗಿತ್ತು.

ಈ ಬಗ್ಗೆ ನೋಡೆಲ್ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳು ಮಾತನಾಡಿ ದಸಾರ ಹಬ್ಬದ ಕಾರಣ ಅಂದು ತೆರೆವುಗೊಳಿಸುವ ಕಾರ್ಯ ಆಗಿಲ್ಲ ಆಗಾಗಿ ದೀಪಾವಳಿ ಹಬ್ಬದ ನಂತರ, ಸಂಚಾರಿ ಪೋಲಿಸ್ ಮಾರ್ಷಲ್ಸ್ ಮತ್ತು ಪಾಲಿಕೆ ಸಿಬ್ಬಂದಿಯೊಂದಿಗೆ ಕಾರ್ಯಚರಣೆ ಮಾಡಲಾಗವುದೆಂದು ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕಸದ ಸಮಸ್ಯೆ: -**

ಸದರಿ ವಿಷಯಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಕಸ ವಿಂಗಡಣೆ ಆಗುತ್ತಿಲ್ಲ ಮನೆಯವರು ಮನೆಯಲ್ಲಿ ಕಸವನ್ನು ಹಸಿ ಒಣಕಸ ವಿಂಗಡಿಸಿ ಸ್ವಚ್ಛತೆ ವಾಹನಕ್ಕೆ ನೀಡಬೇಕು, ಅದರೆ ಬೇರ್ಪಡಿಸದೇ ನೀಡುತ್ತಿದ್ದಾರೆ? ಇದರಿಂದ ವಾರ್ಡ್‌ನ್ಲಲಿ ಕಸ ಅಲ್ಲಿ ನಿಂತು ಹೊಗುತ್ತದೆ. ಹಾಗೂ ಮನೆ ಮನೆಗೆ ಹಸಿ ಒಣ ಸಂಗ್ರಹನೆಗಾಗಿ ಡೆಸ್ ಬೀನ್ ಪಾಲಿಕೆಯಿಂದ ನೀಡಬೇಕು ಇದರಿಂದ ಸಾರ್ವಜನಿಕರಿಗೆ ಉಪಯೋಗವಾಗುತ್ತದೆಂದು ಕೋರಲಾಗಿತ್ತು.

ಈ ಬಗ್ಗೆ ನೋಡಲ್ ಅಧಿಕಾರಿ ರವರು (SWM )(AEE) APPAURAJ ರವರಿಗೆ ಉತ್ತರಿಸಲು ಸೂಚಿಸಿದರು ಆಗಾಗಿ AEE APPAURAJ ರವರು ಮಾತನಾಡಿ ಪಾಲಿಕೆವತಿಯಿಂದ ಡೆಸ್ ಬಿನ್ ನೀಡಲು ಅವಕಾಶವಿಲ್ಲ ಸ್ವಚ್ಚತಾ ಬಗ್ಗೆ ಪ್ರಚಾರ ಪಡಿಸಿದರು ಸಾರ್ವಜನಿಕರು ಸರಿಯಾಗಿ ಸ್ಪಂದಿಸುತ್ತಿಲ್ಲವೆಂದು ತಿಳಿಸಿದರು.

ವಾರ್ಡ್‌ನ ಸದಸ್ಯರಾದ ಆಶಾ ಅಲ್‌ವಿನ್ ರವ್ರರು ಸೊಳ್ಳೆ ನಿಯಂತ್ರಣ ಔಷಧಿ ಸಿಂಪಡಣೆಯಾಗುತ್ತಿಲ್ಲ ಈ ಹೀಂದೆಯ ಈ ವಿಷಯದ ಬ್ಗಗೆ ಚರ್ಚಿಸಲಾಯಿತು.

ಈ ಬಗ್ಗೆ ಸಗಾಯಿ ರಾಜ್ ಹಿರಿಯ ಆರೋಗ್ಯ ವೈದ್ಯಾಧೀಕಾರಿ ರವರು ಮಾತನಾಡಿ ವಾರ್ಡ್‌ನಲ್ಲಿ ಔಷಧಿ ಸಿಂಪಡಣೆ ಮಾಡಲಾಗುತ್ತಿದೆ ತಾವು ಯಾವ ರಸ್ತೆ, ಬೀದಿ ವಿಳಾಸ ನೀಡಿದ್ದಲ್ಲಿ ಅಲ್ಲಿಗೆ

ನಮ್ಮ ಸ್ವಚ್ಚಾತಾ ಗಾರರನ್ನು ಕಳುಹಿಸಿ ಸೋಳ್ಳೆ ನಿಯಂತ್ರಣ ಔಷದಿ ಸಿಂಪಡಿಸಲಾಗುವುದೆಂದು ತಿಳಿಸಿದರು.

ಕಾಮಗಾರಿ ಬಗ್ಗೆ,

ನಂದನವನಂ ಎ. ಬಿ. ಸಿ. ಸ್ಟ್ರೀಟ್ ಗಳಲ್ಲಿ ರಸ್ತೆ ಡಾಂಬರಿಕರಣ ಬಗ್ಗೆ ವಿಚಾರಿಸಿದರು ಈ ಬಗ್ಗೆ ೦ಇ. ಮೂರ್ತಿ ರವರು ಮಾತನಾಡಿ ಈಗಾಗಲೇ ಸದರಿ ವಿಷಯದ ಬಗ್ಗೆ ಚರ್ಚೆಯಾಗಿದೆ ಸ್ಥಳೀಯರು ರಸ್ತೆಗೆ ಕಾಂಕ್ರಿಟ್ ರಸ್ತೆ ಬೇಡ ಹಾಟ್ ಸ್ಪಾಟ್ ನಕಲು ಬಯಸಿದ್ದರೆ ಆಗಾಗಿ ಮುಂದಿನ ದಿನಗಳಲ್ಲಿ ರಸ್ತೆ ಡಾಂಬರಿಕರಣ ಗೊಳಿಸಲಾಗುವುದೆಂದು ತಿಳಿಸಿದರು.

ಜಿ ಸ್ಟ್ರೀಟ್ 10ನೇ ಸ್ಟ್ರೀಟ್ ನಲ್ಲಿ ದೊಡ್ಡ ದೊಡ್ಡ ಹಾಂಪ್ಸ್ ಗಳಿದ್ದು, ಈ ದೊಡ್ಡ ದೊಡ್ಡ ಹಾಂಪ್ಸ್ ಗಳಿಂದ ರಸ್ತೆಯಲ್ಲಿ ವಾಹನಗಳು ಓಡಾಡಲು ಕಷ್ಟವಾಗಿದೆ ಆದ್ದರಿಂದ ತುರ್ತಾಗಿ ತೆರುವುಗೊಳಿಸಲು ಸಭೆಯಲ್ಲಿ ಚರ್ಚಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿ ರವರು ಮಾತನಾಡಿ ಸದರಿ ವಿಷಯದ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಕಾನೂನು ಸುವ್ಯವಸ್ಥೆ ಬಗ್ಗೆ,

ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯಲ್ಲಿ ವಾಸದ ಕೊಠಡಿಯಲ್ಲಿ ಅನಧೀಕೃತ ವಾಸವಿದ್ದು, ಅನಧಿಕೃತ ವಾಸವಿರುವರನ್ನು ತೆರೆವುಗೊಳಿಸಲು ಕೋರಿದರು. ಹಾಗೂ ಈ ಶಾಲೆ ಆವರಣದಲ್ಲಿ ಅನಾಮಿಕರು ಮಧ್ಯ ಸೇವೆನ್ನೆ ದೂಮಪಾನ ಮಾಡುವುದು ಅತಿಯಾಗಿ ಕಂಡು ಬಂದಿರುತ್ತದೆ ಮತ್ತು ಗನ್ ರೋಪ್ ಮಾರ್ಫಿಟೌನ್ , ಲಿಂಗಯ್ಯನಪಾಳ್ಯ ರಸ್ತೆಗಳಲ್ಲಿ ಸರಗಳ್ಳರು, ದ್ವಿಚಕ್ರ ವಾಹನಗಳನ್ನು ಒಂದೇ ಚಕ್ರದಲ್ಲಿ ಓಡಿಸುವುದು ಇದರಿಂದ ರಸ್ತೆಯಲ್ಲಿ ಈಡಾಡಲು ಕಷ್ಟಕರವಾಗಿದೆ ಇದನ್ನು ತಡೆಯುವ ಸಲುವಾಗಿ ಹೆಚ್ಚುವರಿ ಪೋಲಿಸ್ ಮ್ತತು ಪೋಲಿಸ್ ಚೀತಾಗಳ ಬೀಟ್ ರವರನ್ನು ನೇಮಕ ಮಾಡಿ ಕಾನೂನು ಸುವ್ಯವಸ್ಥೆಯನ್ನು ಕಪಾಡಲು ಕೋರಲಾಯಿತು.

ಈ ಬಗ್ಗೆ ನೋಡಲ್ ಅಧಿಕಾರಿ ರವರು ಮಾತನಾಡಿ ಸದರಿ ವಿಷಯದ ಬಗ್ಗೆ ಪೋಲಿಸ್ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸಲು ಗಸ್ತು ಪೋಲಿಸ್ ನೇಮಿಸಲು ಕೋರಲಾಗುವುದೆಂದು ತಿಳಿಸಿದರು.

ಕೋವಿಡ್ –19 ಬಗ್ಗೆ

ಸಭೆಯಲ್ಲಿ ನೋಡಲ್ ಅಧಿಕಾರಿ ರವರು ಕೋವಿಡ್ –19 ತಡೆಗಟ್ಟುವ ವಿಚಾರವಾಗಿ ಪ್ರಸ್ತಾಪಿಸಲು ಶ್ರೀ, ರಘು (ವ್ಯವಸ್ಥಾಪಕರು) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಆಡಳಿತ) ಕಛೇರಿಯಿಂದ ಆಗಾಮಿಸಿದ ರವರನ್ನು ತಿಳಿಸಿಕೊಡಲು ಸೂಚಿಸಿದರು.

ನೋಡೆಲ್ ಅಧಿಕಾರಿ ರವರ ಅಪ್ಪಣೆಯ ಮೇರೆಗೆ ಮಾತನಾಡಲು ಪ್ರಾರಂಭಿಸಿದರು, ಕೋವಿಡ್ –19 ತಡೆಗಟ್ಟುವ ಸಲುವಾಗಿ ಈಗಾಗಲೇ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ ನೋಡೆಲ್ ವಿಶೇಷ ಅಧಿಕಾರಿ (ಶಾಂತಿನರ) ವಿಧಾನ ಸಭಾ ಕ್ಷೇತ್ರಕ್ಕೆ ಶ್ರೀ. ಜಗದೀಶ್ ವಿಶೇಷ ಜಿಲ್ಲಾಧಿಕಾರಿ ರವರನ್ನು ನೇಮಿಸಲಾಗಿದೆ ಸದರಿ ರವರು ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ, ಹಾಗೂ ಕಂದಾಯ ವಿಭಾಗದವರು ಬೂತ್ ಲೇವೆಲ್ ಕಮಿಟಿ ರಚಿಸಿ ಒಂದು ಒಳ್ಳೆಯ ಕೆಲಸವನ್ನು ಮಾಡಿರುತ್ತಾರೆ. ಇದರಿಂದ ಪ್ರತಿ ಬೂತ್ ನಲ್ಲಿ ಕೋವಿಡ್ –19 ಮಾಹಿತಿ

ಪಡೆಯುವ ಸಲುವಾಗಿ ಬಿ ಎಲ್. ಓ ಗಳನ್ನು ನೇಮಕ ಮಾಡಲಾಗಿರುತ್ತದೆ ಬಿ ಎಲ್ ಓ ಗಳು ಕೋವಿಡ್ 19 ಹೊಂದಿರುವ ರವರ ಮಾಹಿತಿ ಮತ್ತು ರವರ ಕುಟುಂಬಸ್ಥರ ವಿವರಗಳನ್ನು ಕಲೆ ಹಾಕಿ ವರದಿಯನ್ನು ವಿಶೇಷ ಅಧಿಕಾರಿಗಳಗೆ ಸಲ್ಲಿಸ ಬೇಕಾಗಿರುತ್ತದೆ.

ಕೋವಿಡ್-19 ಹೊಂದಿರುವ ವ್ಯಕ್ತಿಗೆ ಮನೆಯ್ಲಲಿ ಪ್ರತ್ಯೇಕ ಕೊಠಡಿ ಹಾಗೂ ಶೌಚಾಲಯ ಇದ್ದಲ್ಲಿ ಅವರನ್ನು ಅಲ್ಲೆ ಪ್ರತ್ಯೇಕವಾಗಿ ಇರಿಸಲಾಗುವುದು ಅದರೆ ಪ್ರತ್ಯೇಕ ಕೊಠಡಿ ಹಾಗೂ ಶೌಚಾಲಯ ಇಲ್ಲದಿದ್ದರೆ ಅಂತಹ ರವರನ್ನು ಕೋವಿಡ್ -19 ಕೇರ್ ಸೆಂಟರ್ ಗೆ ಸ್ಥಳಾಂತರಿಸಲಾಗುವುದು ಅಲ್ಲಿ ರವರಿಗೆ ಊಟ, ತಿಂಡಿ, ಚಿಕಿತ್ಸೆ, ನೀಡಿ ಆರೈಕೆ ಮಾಡಿ ಕಳುಹಿಸಲಾಗವುದು ನಮ್ಮ ವಿಪತ್ತು ನಿರ್ವಹಣೆ ಘಟಕ (ಬಿಬಿಎಂಪಿ) (WDMC)
ಮಾಸ್ಕ್, ಗ್ಲೌಸ್, ಫೇಸ್ ಶೀಲ್ಡ್, ನೀಡಲಾಗುವುದು ಎಂದು ತಿಳಿಸಿಕೊಟ್ಟರು ತದನಂತರ ಮುಂದಿನ ದಿನ ಸಭೆಗೆ ಎಲ್ಲಾ BESCOM , BWSSB, SWM, CIVIL, Contractors ಗಳನ್ನು ಹಾಜರಿಸಲು ಸೂಚಿಸಬೇಕೆಂದು ಮನವಿಯನ್ನು ಮಾಡಿಕೊಂಡರು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಭಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಸಭೆಯನ್ನು ನೋಡೆಲ್ ಅಧಿಕಾರಿ ರವರ ಅಪ್ಪಣೆ ಮೇರೆಗೆ **AE,** ಮೂರ್ತಿ ರವರು ವಂದನಾರ್ಪಣೆಯೊಂದಿಗೆ ಸಂಜೆ-6-30ಕ್ಕೆ ಸಭೆ ಮುಕ್ತಾಯ ಗೊಳಿಸಲಾಯಿತು.

ಕಾರ್ಯದರ್ಶಿ
**ಸಹಾಯಕ ಅಭಿಯಂತರರು**
ವಾರ್ಡ್ ಸಂಖ್ಯೆ-89- ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ನೋಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ-89- ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು,

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ